**ಅಸಲು ದಾವಾ ಸಂಖ್ಯೆ 265 – 2014 ಪಿ.ಡಬ್ಲ್ಯೂ- 1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **24.02.2020.**

**ಮುಂದುವರೆದ ಪಾಟೀ ಸವಾಲು ಃ ಶ್ರೀ ಕೆ.ಜಿ. ನ್ಯಾಯಾವಾದಿಗಳಿಂದಃ**

ನಮ್ಮ ತಂದೆಗೆ ಮಾರಾಟ ಮಾಡಿದ ಚೆನ್ನಮ್ಮ ಈಗ ತೀರಿಕೊಂಡಿರುತ್ತಾರೆ. ಚೆನ್ನಮ್ಮನಿಗೆ ವಾರಸುದಾರರು ಇರುವುದಿಲ್ಲ. ಸದರಿ ಚೆನ್ನಮ್ಮನಿಗೆ ಜಯಮ್ಮ ಎಂಬ ಮಗಳು ಇರುತ್ತಾಳೆ ಎಂದರೆ ಸರಿ. ನನಗೆ ಸದರಿ ವಿಷಯ ಗೊತ್ತಿದ್ದರೂ ಸಹ ಚೆನ್ನಮ್ಮನಿಗೆ

ವಾರಸುದಾರಳು ಇರುವುದಿಲ್ಲ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ದಾವಸ್ವತ್ತಿನಲ್ಲಿ 1 ಎಕರೆ 7 ಗುಂಟೆ ನನ್ನ ವಂಶಸ್ಥರಿಗೆ ಖಾತಾ ಇರುತ್ತದೆ ಎಂದರೆ ಸರಿ. 1 ಎಕರೆ 7 ಗುಂಟೆ ನಮ್ಮ ಹೆಸರಿನಲ್ಲಿ ಯಾವ ರೀತಿ ಖಾತೆ ಯಾಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಲು ನನಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ. ಸಾಕ್ಷಿಗೆ ಒಂದು ಪಹಣಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ಪಹಣಿಯು ತನಗೆ ಸಂಬಂಧಿಸಿದ್ದು ಎಂದು ಹೇಳಿದ್ದರಿಂದ ಪಹಣಿಯನ್ನು ನಿಡಿ3 ಎಂದು ಗುರುತಿಸಲಾಯಿತು.

ನಮ್ಮ ತಾತ ಕುಂಟಿ ನಿಂಗೇಗೌಡ ಇವರ ಹೆಸರಿನಲ್ಲಿ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನನ್ನ ತಂದೆ ಕಾಳೇಗೌಡ ಮತ್ತು ಇವರ ತಮ್ಮ ಬೆಟ್ಟೇಗೌಡ. ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಇವರ ಮಧ್ಯೆ ಭಾಗ ಆಗಿರುವುದಿಲ್ಲ. ಸರ್ವೆ ನಂ. 18 ರಲ್ಲಿ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಖಾತೆಗಳು ಬದಲಾವಣೆಯಾದಂತೆ ಪೋಡುಗಳು ಬದಲಾವಣೆಯಾಗಿರುತ್ತವೆ ಎಂದರೆ ಸರಿ. ಈ ಹಂತದಲ್ಲಿ ಸಾಕ್ಷಿಗೆ ಒಟ್ಟು 5 ಪಹಣಿಗಳನ್ನು ತೋರಿಸಲಾಗಿ ಸದರಿ ಪಹಣಿಯಲ್ಲಿ ಇರುವ ಜಮೀನು ಮತ್ತು ತನ್ನ ಮತ್ತು ತನ್ನ ತಮ್ಮನ ಮಕ್ಕಳ ಹೆಸರಿನಲ್ಲಿ ಇರುವುದನ್ನು ಒಪ್ಪಿಕೊಂಡಿದ್ದು ಸದರಿ ಪಹಣಿಗಳನ್ನು ನಿಡಿ4 ರಿಂದ 8 ಎಂದು ಗುರುತಿಸಲಾಯಿತು. ನಿಡಿ4 ರಿಂದ 8 ರಲ್ಲಿರುವ ಆಸ್ತಿಗಳು ನ್ಯಾಯಾಲಯದ ಅದೇಶದ ಪ್ರಕಾರ ವಿಭಾಗದ ಮೂಲಕ ನಮ್ಮ ಹೆಸರಿಗೆ ಬಂದಿರುತ್ತದೆ. ನನ್ನ ಮತ್ತು ನನ್ನ ತಮ್ಮ ರಾಮಯ್ಯರವರ ಮಕ್ಕಳ ಮಧ್ಯೆ ಭಾಗ ಆಗಿರುವ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ.

ನಮ್ಮ ಮುತ್ತಾತ ಬೆಟ್ಟೇಗೌಡ, ನಮ್ಮ ಚಿಕ್ಕತಾತನ ಹೆಸರು ಬೆಟ್ಟೇಗೌಡ, ಚಿಕ್ಕತಾತನ ಮಗನ ಹೆಸರು ಬೆಟ್ಟೇಗೌಡ ಮತ್ತು ನಮ್ಮ ತಂದೆಯ ತಮ್ಮನ ಹೆಸರು ಬೆಟ್ಟೇಗೌಡ ಎಂದರೆ ಸರಿ. ನಮ್ಮ 2ನೇ ತಾತ ದತ್ತು ಹೋಗಿರುವ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ಚಿಕ್ಕಪ್ಪ ಬೆಟೇಗೌಡ ದತ್ತು ಹೋದಾಗ ಕುಳ್ಳೇಗೌಡನ  ಹೆಸರಿನಲ್ಲಿದ್ದ ಆಸ್ತಿಯು ನಮ್ಮ ಚಿಕ್ಕಪ್ಪನಿಗೆ ಬಂದಿರುತ್ತದೆ. ಬೆಟ್ಟೇಗೌಡರ ಮಗ ಬೆಟ್ಟೇಗೌಡ ನನಗೆ ಚಿಕ್ಕಪ್ಪನಾಗಬೇಕು. ಕುಳ್ಳೇಗೌಡ ಅಲಿಯಾಸ್ ಬೋರೇಗೌಡ ಇವರು ಬೆಟ್ಟೇಗೌಡ ತಂದೆ ಬೆಟ್ಟೇಗೌಡ ಈತನಿಗ ದಾನ ಪತ್ರದ ಮುಖಾಂತರ ಆಸ್ತಿ

ಕೊಟ್ಟಿರುತ್ತಾರೆ ಎಂದರೆ ಸರಿ. ಕಾಳಬೋರೇಗೌಡನ ತಮ್ಮ ಬೆಟ್ಟೇಗೌಡನು ಕುಳ್ಳೇಗೌಡ ಆಲಿಯಾಸ್ ಬೋರೇಗೌಡರಿಗೆ ದತ್ತು ಹೋಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1928 ರಲ್ಲಿ ಬೆಟ್ಟೇಗೌಡನು ದತ್ತು ಹೋಗಿರುತ್ತಾನೆ. ಬೆಟ್ಟೇಗೌಡರು ದತ್ತು ಹೋಗಿರುವ ಕುರಿತು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ.

ಬೆಟ್ಟೇಗೌಡ ತಂದೆ ಬೆಟ್ಟೇಗೌಡ ನನ್ನ 3 ನೇ ತಾತನ ಮಗ ಮತ್ತು ಈತನ ಹೆಸರಿನಲ್ಲಿ ಕುಳ್ಳೇಗೌಡ ಬರೆದಿರುವ ದಾನ ಪತ್ರವು ವಜಾವಾಗಿರುವ ಕುರಿತು ನನಗೆ ಗೊತ್ತಿರುವುದಿಲ್ಲ. ಚೆನ್ನಮ್ಮ ನನ್ನ 3 ನೇ ತಾತನಾದ ಬೆಟ್ಟೇಗೌಡನ 1 ನೇ ಹೆಂಡತಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

**ಸಾ. ಹೇ. ಬೆ. ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇದೆ**

**ಅಪರ ಸಿವಿಲ್ ನ್ಯಾಯಾಧೀಶರು**
ನಾಗಮಂಗಲ